# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 684

ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 23-12-2022

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಸಗಿ ಬಸ್ ಕಂಪನಿಗಳು ಎಷ್ಟು; ಅವು ಯಾವುವು; | ಮೋಟಾರು ವಾಹನ ಕಾಯ್ದೆ 1988, ಕೇಂದ್ರ ಮೋಟಾರು ವಾಹನ ನಿಯಮಾವಳಿ 1989 ಮತ್ತು ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989 ರ ಅಡಿಯಲ್ಲಿ ಖಾಸಗಿ ಬಸ್ ಕಂಪನಿಗಳ ನೋಂದಣಿಗೆ ಅವಕಾಶವಿರುವುದಿಲ್ಲ. ಮೋಟಾರು ವಾಹನ ಕಾಯ್ದೆ 1988 ರಡಿಯಲ್ಲಿ ಅರ್ಜಿ ಸಲ್ಲಿಸುವ ಸಂಸ್ಥೆಗಳು ಮತ್ತು ವೈಯಕ್ತಿಕ ಅರ್ಜಿದಾರರಿಗೆ ರಹದಾರಿ ನೀಡಲು ಅವಕಾಶ ಕಲ್ಪಿಸಿದ್ದು ಅದರಂತೆ ರಹದಾರಿಗಳನ್ನು ನೀಡಲಾಗುತ್ತಿದೆ. |
| ಆ | ಹಬ್ಬದ ಸಂದರ್ಭದಲ್ಲಿ ಖಾಸಗಿ ಬಸ್ಸುಗಳು ದುಪ್ಪಟ್ಟು ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಖಾಸಗಿ ಕಂಪನಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (2019-2022 ರವರೆಗಿನ (3) ವರ್ಷಗಳ) ಪ್ರಕರಣಗಳ ಪಟ್ಟಿ ನೀಡುವುದು). | ಹೌದು. ಹಬ್ಬದ ಸಂದರ್ಭದಲ್ಲಿ ಖಾಸಗಿ ಬಸ್ಸುಗಳು ದುಪ್ಪಟ್ಟು ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br>ಸಾರಿಗೆ ಇಲಾಖೆ ವತಿಯಿಂದ ಇಂತಹ ವಾಹನಗಳ ವಿರುದ್ಧ ತಪಾಸಣಾ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದ್ದು, ದಿನಾಂಕ: 01-04-2019 ರಿಂದ 31-10-2022 ರವರೆಗೆ ರಾಜ್ಯಾದ್ಯಂತ ಒಟ್ಟು 5240 ಪ್ರಕರಣಗಳನು ದಾಖಲಿಸಿ, ರೂ.79,66,014/- ಗಳ ದಂಡವನು ವಸೂಲಿಸ ಲಾಗಿದೆ. ಪ್ರವರ್ತನ ಚಟುವಟಿಕೆ ನಿರಂತರವಾಗಿ ಹಮ್ಮಿಕೊಂಡು ನಿಯಮ ಉಲ್ಲಂಘಿಸುವ ವಾಹನಗಳ ರಹದಾರಿ ವಿರುದ್ಧ ಕ್ರಮ ಕೈಗೊಳಲಾಗುತಿದೆ. ಕೈಗೊಂಡ ತಪಾಸಣಾ ಕಾರ್ಯದ ವಿವರಗಳು ಕೆಳಕಂಡಂತಿವೆ:-<br>ದಾಖಲಿಸಿದ ಪ್ರಕರಣಗಳು: 5240<br>ಜಪ್ತಿ ಮಾಡಿದ ವಾಹನಗಳು: 12<br>ರಹದಾರಿ ಉಲ್ಲಂಘನೆ ಪ್ರಕರಣಗಳು: 859<br>ರಹದಾರಿ ರದ್ದತಿ: 00<br>ರಹದಾರಿ ಅಮಾನತ್ತು: 09<br>ವಸೂಲಿಸಿದ ದಂಡ (ರೂ.ಗಳಲ್ಲಿ): 79,66,014 |
| ಇ | ಇಲ್ಲಿಯವರೆಗೆ ಎಷ್ಟು ಪ್ರಕರಣದಡಿ ಎಷ್ಟು ಖಾಸಗಿ ಬಸ್ಸುಗಳ ಪರವಾನಗಿ ಯನ್ನು ರದ್ದುಗೊಳಿಸಲಾಗಿದೆ; | ಜಪ್ತಿಮಾಡಿಕೊಂಡ 12 ವಾಹನಗಳ ಪೈಕಿ 09 ವಾಹನಗಳ ರಹದಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ. |
| ಈ | ಹಬ್ಬದ ಸಂದರ್ಭದ ಮೊದಲು 500 ರೂ 750 ರೂ ಇರುವಂತಹ ಮೊತ್ತವನ್ನು ಹಬ್ಬದ | ನಿಗಧಿಪಡಿಸಿದ ದರಕ್ಕಿಂತ ಹೆಚ್ಚಿನ ದರ ವಸೂಲಿ ಮಾಡುವ |



Generated from eOffice by B SREERAMULU, TD-MINISTER, TRANSPORT MINISTER, Trans on 19/12/2022 02:12 PM

| | | |
|---|---|---|
| | ದಿನಗಳಲ್ಲಿ 2000-4500 ರೂಗಳ ದುಪ್ಪಟ್ಟು ದರವನ್ನು ಸರ್ಕಾರದ ಷರತ್ತುಗಳ ವಿರುದ್ಧವಾಗಿ ನಿಗಧಿಪಡಿಸುತ್ತಿರುವವರ ಮೇಲೆ ಸರ್ಕಾರ ಕೈಗೊಂಡ ಕ್ರಮೆಗಳೇನು? | ವಾಹನಗಳ ವಿರುದ್ಧ ಸಾರಿಗೆ ಇಲಾಖೆಯ ವತಿಯಿಂದ ನಿರಂತರವಾಗಿ ಪ್ರವರ್ತನ ಕಾರ್ಯ ಕೈಗೊಳ್ಳುತ್ತಿದ್ದು, ರಾಜೀ ದಂಡ ವಸೂಲಿ ಜೊತೆಗೆ ರಹದಾರಿಗಳ ಮೇಲೆ ಅಮಾನತ್ತು/ರದ್ದತಿ ಕ್ರಮ ಜರುಗಿಸಲಾಗುತ್ತಿದೆ. ಇಂತಹ ವಾಹನಗಳ ವಿರುದ್ಧ ಮೇಲಾಧಿಕಾರಿಗಳ ನೇತೃತ್ವದಲ್ಲಿ ವಿಶೇಷ ಪ್ರವರ್ತನ ಕಾರ್ಯಗಳನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳಲಾಗುತ್ತಿದೆ. ಇಂತಹ ತಪಾಸಣಾ ಕಾರ್ಯದಡಿ, ಪ್ರತಿ ಜಿಲ್ಲೆಗಳಲ್ಲಿ ಸರ್ಕಾರಿ ರಜೆ ದಿನಗಳಲ್ಲಿ ಬೇರೆ ಬೇರೆ ಜಿಲ್ಲೆಗಳಿಂದ ಪ್ರವರ್ತನ ಸಿಬ್ಬಂದಿಗಳನ್ನು ನಿಯೋಜಿಸಿ ಪ್ರಯಾಣಿಕರ ವಾಹನಗಳ ತಪಾಸಣಾ ಕಾರ್ಯ ಕೈಗೊಳ್ಳಲಾಗುತ್ತಿದೆ. ಹಾಗೂ ಪ್ರಯಾಣಿಕರು ನಿಗಧಿತ ದರಕ್ಕಿಂದ ಹೆಚ್ಚಿನ ದರ ನೀಡದಂತೆ ತಿಳುವಳಿಕೆ ನೀಡಲಾಗುತ್ತಿದೆ. ಇಲಾಖೆಯು ಕೈಗೊಂಡ ಪ್ರವರ್ತನ ಕಾರ್ಯದ ವಿವರಗಳನ್ನು ಮೇಲ್ಕಾಣಿಸಿದ (ಆ) ರಲ್ಲಿ ಒದಗಿಸಲಾಗಿದೆ. |

ಟಿಡಿ 135 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ
ಸಚಿವರು.



Generated from eOffice by B SREERAMULU, TD-MIN(BS), TRANSPORT MINISTER, Trans on 19/12/2022 02:12 PM